**107**

**III**

Total No. of Questions – 15

Total No. of Printed Pages - 4

Regd. No. | | | | | | | | | | |

## Part - II
## KANNADA, Paper – I
## (Second Language)

Time : 3 Hours] [Max. Marks : 100

I. ಈ ಕೆಳಗಿನ ಪದ್ಯಗಳಲ್ಲಿ ಒಂದಕ್ಕೆ ಭಾವಾರ್ಥ ಬರೆಯಿರಿ. 1 × 6 = 6

ಕಾಲುಗಳೆಂಬವು ಗಾಲಿ ಕಂಡಯ್ಯಾ
ದೇಹವೆಂಬುದು ತುಂಬಿದ ಬಂಡಿ ಕಂಡಯ್ಯಾ
ಬಂಡಿಯ ಹೊಡೆವವರೈವರೂ ಮಾನಿಸರು
ಒಬ್ಬರಿಗೊಬ್ಬರು ಸಮವಿಲ್ಲಯ್ಯಾ
ಅದರಿಚ್ಚೆಯನರಿದು ಹೊಡೆಯದಿರ್ದಡೆ
ಅದರಚ್ಚು ಮುರಿಯಿತ್ತು, ಗುಹೇಶ್ವರಾ.

ಅಥವಾ

ಹರಿದ ಚಂದ್ರ, ತೂತುಬಿದ್ದ ನಕ್ಷತ್ರ ಯಾರದೋ
ಚಾಟಿ ಏಟಿಗೆ ಗಿರ್ರನೆ ತಿರುಗುವ ಗ್ರಹ ಬುಗುರಿಗಳು
ದಿಕ್ಕು ದೆಸೆಯಿಲ್ಲದೆ ಅಲೆಯುವ ಅಲೆಮಾರಿ
ಉಲ್ಕೆಗಳು, ಧೂಮಕೇತುಗಳು ನಿದ್ದೆ ಬಾರದೆ ಒದ್ದಾಡುತಿರಲು
ಒಂದು ಹಾಸಿಗೆ ಬೇಕು ಅಮ್ಮಿ ಹೊಲಿದು ಕೊಡು.

II. ಈ ಕೆಳಗಿನ ಎರಡು ಪ್ರಶ್ನೆಗಳಲ್ಲಿ ಒಂದಕ್ಕೆ 20 ವಾಕ್ಯಗಳು ಮೀರದಂತೆ ಉತ್ತರಿಸಿ. 1 × 6 = 6

(1) ಶಿವನು ಚೆನ್ನಯ್ಯನ ಮನೆಯಲ್ಲಿ ಊಟ ಮಾಡಿದ ಪ್ರಸಂಗವನ್ನು ವಿವರಿಸಿ.

(2) ಅಖಂಡ ಕರ್ನಾಟಕವು ಬರೀ ರಾಜಕೀಯ ನಾಟಕವಲ್ಲ, ಏಕೆ ?

III. ಈ ಕೆಳಗಿನ ಎರಡು ಪ್ರಶ್ನೆಗಳಲ್ಲಿ **ಒಂದಕ್ಕೆ** 20 ವಾಕ್ಯಗಳು ಮೀರದಂತೆ ಉತ್ತರಿಸಿ. $1 \times 6 = 6$

(1) ರಾಗಿಮುದ್ದೆ ಕುರಿತು ಇರುವ ಪತ್ತಾರು ಮೆಚ್ಚುಗೆಯ ನಂಬಿಕೆಯ ಮಾತುಗಳಾವುವು ?

(2) ನಾಗತಿಹಳ್ಳಿ ಚಂದ್ರಶೇಖರ್ ರವರ ನೇಪಾಳ ಪ್ರವಾಸದ ಅನುಭವಗಳನ್ನು ಕುರಿತು ಬರೆಯಿರಿ.

IV. ಈ ಕೆಳಗಿನ ಎರಡು ಪ್ರಶ್ನೆಗಳಲ್ಲಿ **ಒಂದಕ್ಕೆ** 20 ವಾಕ್ಯಗಳು ಮೀರದಂತೆ ಉತ್ತರಿಸಿ. $1 \times 6 = 6$

(1) ಸೈತಾನನು ತನ್ನ ಪರಿಚಯ ಮಾಡಿಕೊಂಡ ಬಗೆ ಹಾಗೂ ಬಂದಂಥ ಕಾರಣಗಳನ್ನು ಕುರಿತು ಬರೆಯಿರಿ.

(2) ಬೋಳೇಶಂಕರನ ಅಣ್ಣಂದಿರೇ ವಾಸಿ ಎಂದು ಪಿಶಾಚಿಗಳು ಹೇಳುವ ಕಾರಣಗಳನ್ನು ಬರೆಯಿರಿ.

V. ಈ ಕೆಳಗಿನ ನಾಲ್ಕರಲ್ಲಿ **ಎರಡಕ್ಕೆ** ಸಂದರ್ಭ ಸೂಚಿಸಿ ವಿವರಿಸಿ ಬರೆಯಿರಿ. $2 \times 3 = 6$

(1) ರಾಮನ ಸೇವೆ ಸಂದುದೇ ತನಗೆ.

(2) ನೃಪತುಂಗನೆ ಚಕ್ರವರ್ತಿ ! ಪಂಪನಲ್ಲಿ ಮುಖ್ಯಮಂತ್ರಿ !

(3) ರೈಲು ಹೊರಡಲು ಜ್ಯೋತಿಷ್ಯದ ಅನುಮತಿಯನ್ನು ಯಾರೂ ಕೇಳುವುದಿಲ್ಲ.

(4) ಈ ಬಿಸಿಲೇ ಗೌತಮನನ್ನು ಸಂನ್ಯಾಸಕ್ಕೆ ದೂಡಿರಬೇಕು.

VI. ಈ ಕೆಳಗಿನ ನಾಲ್ವರು ಕವಿ/ಲೇಖಕರಲ್ಲಿ **ಇಬ್ಬರ** ಪರಿಚಯ ಬರೆಯಿರಿ. $2 \times 3 = 6$

(1) ಎಚ್. ನರಸಿಂಹಯ್ಯ (2) ವೀಣಾ ಶಾಂತೇಶ್ವರ

(3) ಲಕ್ಷ್ಮೀಶ (4) ಎಚ್.ಎಸ್. ಶಿವಪ್ರಕಾಶ

VII. ಈ ಕೆಳಗಿನ ನಾಲ್ಕು ಪ್ರಶ್ನೆಗಳಲ್ಲಿ **ಎರಡಕ್ಕೆ** ಸಂಕ್ಷಿಪ್ತವಾಗಿ ಉತ್ತರಿಸಿ. $2 \times 3 = 6$

(1) ದುಶ್ಯಾಸನನು ಅಣ್ಣನಿಗೆ ತೋರಿದ್ದ ವಿನಯಶೀಲತೆ ಯಾವುದು ?

(2) ಕೈದು, ಕಾಲೋರಗಗಳಿಗೆ ಏನೇನು ಇರುವುದಿಲ್ಲ ?

(3) ಮೂರ್ಛಿತಳಾದ ಸೀತೆಯನ್ನು ಲಕ್ಷ್ಮಣ ಹೇಗೆ ಉಪಚರಿಸಿದನು ?

(4) ಅರಳಿಸಿದ ದಾಳಿಂಬೆ ಯಾವ ರೀತಿ ಕಾಣುತ್ತದೆ ?

VIII. ಈ ಕೆಳಗಿನ ನಾಲ್ಕು ಪ್ರಶ್ನೆಗಳಲ್ಲಿ **ಎರಡಕ್ಕೆ** ಸಂಕ್ಷಿಪ್ತವಾಗಿ ಉತ್ತರಿಸಿ. $2 \times 3 = 6$

(1) ಗಾಂಧಿ ಎಂಬ ಹುಡುಗನ ಕೊನೆಯ ಆಸೆ ಯಾವುದು ?

(2) ಬುದ್ಧನ "ವಿನಯ ಪೀಟಿಕಾ" ಗ್ರಂಥದಲ್ಲಿ ಯಾರಿಂದ ದೂರವಿರಬೇಕೆಂದು ಎಚ್ಚರಿಸಿದ್ದಾನೆ ?

(3) ನಿರೂಪಕರ ತಂದೆ ಅವರನ್ನು ಯಾರು ಯಾರಿಂದ ಅಗಲಿಸಿ ಊರಿಗೆ ಕರೆ ತಂದರು ?

(4) ನೇಪಾಳದ ವೈಮಾನಿಕ ಸಾರಿಗೆ ವ್ಯವಸ್ಥೆ ಹೇಗಿದೆ ?

IX. ಈ ಕೆಳಗಿನ ನಾಲ್ಕು ಪ್ರಶ್ನೆಗಳಲ್ಲಿ **ಎರಡಕ್ಕೆ** ಸಂಕ್ಷಿಪ್ತವಾಗಿ ಉತ್ತರಿಸಿ. **2 × 3 = 6**

(1) ಬೆಟ್ಟದ ಮೇಲಿನ ದೇವತೆಯು ಬೋಳೇಶಂಕರನ ಅಣ್ಣ – ಅತ್ತಿಗೆಯರಿಗೆ ಹೇಗೆ ಕಾಣಿಸುತ್ತದೆ ?

(2) ಸೈತಾನನು ಮೂರು ಪಿಶಾಚಿಗಳನ್ನು ಭೂಲೋಕಕ್ಕೆ ಕಳುಹಿಸಿದ್ದೇಕೆ ?

(3) ರಾಜಕುಮಾರಿಯ ಹೊಟ್ಟೆನೋವು ವಾಸಿ ಮಾಡುವವರಿಗೆ ಏನೇನು ಬಹುಮಾನ ಕೊಡುವುದಾಗಿ ಡಂಗುರ ಸಾರಿಸುತ್ತಾರೆ ?

(4) ಬೋಳೇಶಂಕರ ಹುಡುಗಿಯರಿಗೆ ಚಿನ್ನ ಕೊಟ್ಟಿದ್ದಕ್ಕೆ ಸಾವ್ಕಾರಣ್ಣ ಏನು ಹೇಳುತ್ತಾನೆ ?

X. ಈ ಕೆಳಗಿನ ಎರಡರಲ್ಲಿ **ಒಂದನ್ನು** ಕುರಿತು ಪತ್ರ ಬರೆಯಿರಿ. **1 × 6 = 6**

(1) ಪ್ರವಾಸಕ್ಕೆ ಹೋಗಲು ಅನುಮತಿ ಮತ್ತು ಹಣಕ್ಕಾಗಿ ನಿಮ್ಮ ತಂದೆಯವರಿಗೊಂದು ಪತ್ರ ಬರೆಯಿರಿ.

(2) ಕಾಲೇಜಿಗೆ ತೆರಳಲು ಬಸ್ಸಿನ ವ್ಯವಸ್ಥೆ ಮಾಡಬೇಕೆಂದು ಡಿಪೋ ಮ್ಯಾನೇಜರರಿಗೊಂದು ಪತ್ರ ಬರೆಯಿರಿ.

XI. (A) ಈ ಕೆಳಗಿನ ಎಂಟು ಸಂಧಿ ಪದಗಳಲ್ಲಿ **ನಾಲ್ಕಕ್ಕೆ** ಸಂಧಿ ಬಿಡಿಸಿ, ಸಂಧಿಯನ್ನು ಹೆಸರಿಸಿ. **4 × 2 = 8**

(1) ಮಾನ್ಯವಾದ (2) ರಸಗಬ್ಬು (3) ಕರತಲಾಮಲಕ (4) ಧರೇಂದ್ರ

(5) ವನೌಷಧಿ (6) ಅತ್ಯುಗ್ರ (7) ಅಜಂತ (8) ಚಿನ್ಮಯ

(B) ಈ ಕೆಳಗಿನ ಆರು ಸಮಾಸಗಳಲ್ಲಿ **ಮೂರಕ್ಕೆ** ಸಮಾಸ ಬಿಡಿಸಿ, ಸಮಾಸವನ್ನು ಹೆಸರಿಸಿ. **3 × 2 = 6**

(1) ತರುಲತೆ ಬಳ್ಳಿಗಳು (2) ಮುಂದಲೆ (3) ಕಮಲಾಸನ

(4) ಕೈಕೊಡು (5) ಆ ಮನೆ (6) ಕವಿ ವಂದಿತ

(C) ಈ ಕೆಳಗಿನ ಎಂಟು ಪದಗಳಲ್ಲಿ ಐದಕ್ಕೆ ಅರ್ಥ ಬರೆಯಿರಿ. **5 × 1 = 5**

(1) ಬೌಲ (2) ತಪಾಸಣೆ (3) ಪಾಟಿ (4) ಜೋಳವಾಳಿ

(5) ಪವಳ (6) ನಾವೆ (7) ತರಣಿ (8) ಅಭವ

XII. ಈ ಕೆಳಗಿನವುಗಳಲ್ಲಿ ಒಂದನ್ನು ಕುರಿತು ಪ್ರಬಂಧ ಬರೆಯಿರಿ. $1 \times 6 = 6$

(1) ತಿತ್ಲಿ ಚಂಡಮಾರುತ

(2) ಉಪಗ್ರಹಗಳು

(3) ಯೋಗ ಮತ್ತು ವ್ಯಾಯಾಮಗಳ ಮಹತ್ವ

XIII. ಈ ಕೆಳಗಿನ ಎಲ್ಲಾ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿ. $5 \times 1 = 5$

(1) ಹಸಿದಾಗ ಏನನ್ನು ನೀಡಬೇಕೆಂದು ಅಲ್ಲಮ ಹೇಳುತ್ತಾನೆ ?

(2) ಲೋಕದ ಚೇಷ್ಟೆಗೆ ಬೀಜ ಯಾವುದು ?

(3) ಚೋಳದೇಶವು ಯಾರಿಗೆ ನೆಲೆಯಾಗಿತ್ತು ?

(4) ಭೂದೇವಿಯ ಮಗಳು ಯಾರು ?

(5) ಇಂದು ಬಂದು ನಾಳೆ ಹೋಗುವುದು ಯಾವುದು ?

XIV. ಈ ಕೆಳಗಿನ ಎಲ್ಲಾ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿ. $5 \times 1 = 5$

(1) ಹೋಟೆಲಿನಲ್ಲಿ ಕರಿಯ ಏನು ಕೆಲಸ ಮಾಡುತ್ತಿದ್ದ ?

(2) ಜ್ಯೋತಿಷಿಗಳ ಭವಿಷ್ಯವಾಣಿ ಓದಲು ಹೇಗಿರುತ್ತದೆ ?

(3) ಅಶೋಕನ ಸ್ಥಂಭ ಎಲ್ಲಿದೆ ?

(4) ರಕ್ಷಾ ಕರಂಡವು ಯಾರ ಕೈಯಿಂದ ಕೆಳಗೆ ಬಿದ್ದಿತು ?

(5) ಹಲಸಿನ ಮರ ಮಾರಿದ್ದರಿಂದ ಕರಿಸಿದ್ದೇಗೌಡನಿಗೆ ಸಿಕ್ಕ ಹಣವೆಷ್ಟು ?

XV. ಈ ಕೆಳಗಿನ ಎಲ್ಲಾ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿ. $5 \times 1 = 5$

(1) ಬೋಳೇಶಂಕರನ ಅಣ್ಣ ಅತ್ತಿಗೆಯರಿಗೆ ಉಂಟಾದ ಆಸೆ ಯಾವುದು ?

(2) ಪಿಶಾಚಿಗಳು ಯಾರ ಹೆಸರು ಕೇಳಿದರೆ ಹೆದರುತ್ತವೆ ?

(3) ಬೋಳೇಶಂಕರ ಎಲ್ಲಿ ಕುಳಿತು ಊಟ ಮಾಡಬೇಕೆಂದು ಅವನ ಅತ್ತಿಗೆ ಹೇಳುತ್ತಾಳೆ ?

(4) ಬೋಳೇಶಂಕರನಿಂದ ಬೇರು ಕಿತ್ತುಕೊಳ್ಳಲು ಪಿಶಾಚಿ ಯಾವ ವೇಷದಲ್ಲಿ ಬರುತ್ತದೆ ?

(5) ಸೈನಿಕರು ಯಾವುದಕ್ಕೆ ಜಯವಾಗಲಿ ಎಂದು ಹಾಡಿದರು ?